# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : | 321(421) |
| ಸದಸ್ಯರ ಹೆಸರು : | ಶ್ರೀ ಎಸ್.ವಿ. ಸಂಕನೂರ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ : | 12.12.2018 |
| ಉತ್ತರಿಸುವವರು : | ಮಾನ್ಯ ಅರಣ್ಯ ಸಚಿವರು. |

*****

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಉಪ ವಲಯ ಅರಣ್ಯಾಧಿಕಾರಿ ಮತ್ತು ವಲಯ ಮೋಜಣಿದಾರರ ಹುದ್ದೆಗೆ ನಿಗಧಿಪಡಿಸಿರುವ ವಿದ್ಯಾರ್ಹತೆ ಏನು; ಹಾಗೂ ನಿಗಧಿಪಡಿಸಿದ ವೇತನ ಶ್ರೇಣಿ ಯಾವುದು; | ಉಪ ವಲಯ ಅರಣ್ಯಾಧಿಕಾರಿ ಮತ್ತು ಮೋಜಣಿದಾರರ ಹುದ್ದೆಗೆ ನಿಗಧಿಪಡಿಸಿರುವ ವಿದ್ಯಾರ್ಹತೆ:- ಬಿ.ಎಸ್ಸಿ (ವಿಜ್ಞಾನ) ಹಾಗೂ ಬಿ.ಎಸ್ಸಿ (ಅರಣ್ಯ ಶಾಸ್ತ್ರ) ವೇತನ ಶ್ರೇಣಿ ರೂ. 23.500-47,650. |
| ಆ) | ಅರಣ್ಯ ಇಲಾಖೆಯ ಉಪ ವಲಯ ಅರಣ್ಯಾಧಿಕಾರಿ ಮತ್ತು ವಲಯ ಮೋಜಣಿದಾರ ವೃಂದವು ಪೋಲೀಸ್ ಇಲಾಖೆಯ ಸಬ್ ಇನ್ಸ್‌ಪೆಕ್ಟರ್, ಪಂಚಾಯತ್ ರಾಜ್ ಇಲಾಖೆಯ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ತೋಟಗಾರಿಕೆ ಇಲಾಖೆಯ ಸಹಾಯಕ ತೋಟಗಾರಿಕೆ ಅಧಿಕಾರಿ ಹುದ್ದೆಗಳಿಗೆ ಸಮಾನವಾದ ಹುದ್ದೆಯಾಗಿದ್ದರೂ ಸಹಿತ ವೇತನ ಮಾತ್ರ ಆ ಹುದ್ದೆಗಳಿಗಿಂತಲೂ ಕಡಿಮೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಬಂದಿದೆ. |
| ಇ) | ಸಮಾನ ಹುದ್ದೆಗೆ ಸಮಾನ ವೇತನ ಶ್ರೇಣಿ ಎಂಬ ಸರ್ಕಾರದ ನೀತಿ ಇದ್ದರೂ ಸಹಿತ ಉಪ ವಲಯ ಅರಣ್ಯಾಧಿಕಾರಿ ವೃಂದಕ್ಕೆ ವೇತನ ತಾರತಮ್ಯ ಎರಡು ದಶಕಗಳಿಂದಲೂ ಆಗುತ್ತಿದ್ದು ಅನ್ಯಾಯವನ್ನು ತುರ್ತಾಗಿ ಸರಿಪಡಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ: | 6ನೇ ವೇತನ ಆಯೋಗವು ಸಲ್ಲಿಸಿರುವ 2ನೇ ವರದಿಯಲ್ಲಿ ಕೆಲವು ಇಲಾಖೆಗಳ ವೃಂದಗಳ ವೇತನ ಶ್ರೇಣಿಯನ್ನು ಪರಿಷ್ಕರಿಸಿದ್ದು, ಸಚಿವ ಸಂಪುಟವು ಈ ಸಂಬಂಧ ಸಚಿವ ಸಂಪುಟ ಉಪ ಸಮಿತಿಯನ್ನು ರಚಿಸಿದ್ದು, ಸಚಿವ ಸಂಪುಟ ಉಪ ಸಮಿತಿಯು ಮಾಡುವ ಶಿಫಾರಸ್ಸನ್ನು ಮತ್ತು ಈ ಸಂಬಂಧ ಸಚಿವ ಸಂಪುಟದ ತೀರ್ಮಾನವನ್ನು ನಿರೀಕ್ಷಿಸಲಾಗುತ್ತಿದೆ. |
| ಈ) | ವನ್ಯಜೀವಿಗಳ ದಾಳಿ ಮತ್ತು ದರೋಡೆಕೋರರ ದಾಳಿಯಿಂದಾಗಿ ಜೀವ ಹಾನಿ ಸಂಭವಿಸಬಹುದಾದ ಮಧ್ಯೆ ಕರ್ತವ್ಯ ನಿರ್ವಹಿಸುತ್ತಿರುವ ಅರಣ್ಯ ಇಲಾಖೆಯ ಉಪ ವಲಯ ಅರಣ್ಯಾಧಿಕಾರಿಗಳ ನೇಮಕಾತಿಗೆ ವಿಜ್ಞಾನ ಪದವಿ ನಿಗದಿ ಮಾಡಿ, ಇತರೆ ಇಲಾಖೆಗಳಲ್ಲಿ ಪದವಿ ವಿದ್ಯಾರ್ಹತೆ ನೌಕರರಿಗೆ ಇರುವ ವೇತನ ನಿಗದಿ ಮಾಡದೇ ಕೇವಲ ವಾಹನ ಚಾಲಕರಿಗೆ ಇರುವ ವೇತನವನ್ನು ನಿಗಧಿ ಮಾಡಿರುವುದು ಸರಿಯೇ; ಈ ರೀತಿಯ ಅನ್ಯಾಯವನ್ನು ಸರ್ಕಾರವು ಯಾವ ಕಾಲಮಿತಿಯೊಳಗೆ ಸರಿಪಡಿಸುತ್ತದೆ: | ಮೇಲೆ ತಿಳಿಸಿದಂತೆ ವಿಷಯವು ಸಚಿವ ಸಂಪುಟದ ಉಪ ಸಮಿತಿಯ ಪರಿಶೀಲನೆಯಲ್ಲಿದೆ. |

...2...

| | | |
|---|---|---|
| ಉ) | ಉಪ ವಲಯ ಅರಣ್ಯಾಧಿಕಾರಿ ವೃಂದದಲ್ಲಿ 2014 ರಲ್ಲಿ ದ್ವಿತಿಯ ದರ್ಜೆ ಮತ್ತು ಪ್ರಥಮ ದರ್ಜೆ ಮೋಜಣಿದಾರ ಎಂಬ ಎರಡು ವೃಂದಗಳನ್ನು ವಿಲೀನ ಮಾಡಿ ಕರ್ತವ್ಯ ವ್ಯಾಪ್ತಿ ಮತ್ತು ಜವಾಬ್ದಾರಿ ಹೆಚ್ಚಿಸಿರುವುದರಿಂದ ವಿಶೇಷ ಪ್ರಕರಣವೆಂದು ಸರಕಾರವು ಸದರಿ ವೃಂದದ ವೇತನ ಪರಿಷ್ಕರಣೆಗೆ ಮುಂದಾಗುವುದೇ? | ದಿನಾಂಕ: 30.12.2015ರಲ್ಲಿ ದ್ವಿತಿಯ ದರ್ಜೆ ಮತ್ತು ಪ್ರಥಮ ದರ್ಜೆ ಮೋಜಣಿದಾರರ ಹುದ್ದೆಗಳನ್ನು ಉಪ ವಲಯ ಅರಣ್ಯ ಅಧಿಕಾರಿ ವೃಂದದಲ್ಲಿ ವಿಲೀನಗೊಳಿಸಿ ಉಪ ವಲಯ ಅರಣ್ಯ ಅಧಿಕಾರಿ ಕಂ ಮೋಜಣಿದಾರ ಎಂದು ಪದನಾಮೀಕರಿಸಲಾಗಿದೆ.<br><br>ಉಪ ವಲಯ ಅರಣ್ಯಾಧಿಕಾರಿ / ಮೋಜಣಿದಾರರ ಹುದ್ದೆಯ ವೇತನ ಪರಿಷ್ಕರಣೆ ಸಂಬಂಧ ವಿಷಯವು ಸಚಿವ-ಸಂಪುಟ ಉಪ ಸಮಿತಿ ಮುಂದೆ ಇರುತ್ತದೆ. |

**ಕಡತ ಸಂಖ್ಯೆ: ಅಪಜೀ 275 ಅಅಸೇ 2018**

(ಆರ್. ಶಂಕರ್)

ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು.